Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court Civil Judge

## Previous Year Paper

### Mains 2014 Translation Paper (Held On 12 Sept 2015)

Teachingninja.in

## TRANSLATION PAPER

Time: 10.00 AM – 1.00 PM
Date: 12.09.2015

Max.Marks: 100

## PART-I

**I. Translate the following deposition into Kannada language: 15**

I am now shown Ex.P.6. The house bearing No.378 is not seen in Ex.P.6. The portion marked by me in red ink in Ex.P.7 is the wall of the house bearing No.378 in respect of which my brother has entered into an Agreement of sale. In the said wall, a window is also seen. The four stone pillars are seen in Ex.P.7. The witness volunteers that these four stone pillars were fixed by Rajashekar only. It is incorrect to suggest that I and my brother who affixed these four pillars found in Ex.P.7 in the year 1999 at the time of the institution of the suit. It is true that these four stone pillars which are seen in Ex.P.7 are on the Western side of the house property bearing No.378. The house of Badigeppanavara mariyannanavar is seen in Ex.P.7 and it is now shown to me. It is marked as Ex.P.7(a). I again say that the house of Badigeppanavara mariyannanavar is not seen. The witness volunteers that the house marked as Ex.P.7(a) belongs to plaintiff, Nagaraj. The witness further volunteers that Sri.Nagaraj is residing in the house seen at Ex.P.7(a) after partition. Now, I am shown some open space in between the four pillars and the house of plaintiff Nagaraj. This open space is used as passage for ingress and egress by the

Teachingninja.in

plaintiff. There is a well on the Northern side of the open space seen in Ex.P.7 which is used as a passage. The said well is seen in Ex.P.6. The open space found in Ex.P.7 and Ex.P.8 are one and the same. Ex.D.4 does not bear the signature of my brother Raghunatha Rao."

**II. Translate the following document into Kannada language: 15**

"NOW THEREFORE, I execute this General Power of Attorney in favour of aforesaid MR.UMESH KUMAR, aged 57 years, S/o Mr.A.K.Annayya, residing at Domba Kripa, Polipu, Kaup Post, Udupi District and who knows all the facts relating to the transaction of the company and hence I am conferring him the following powers.

1. My Attorney shall be competent to appear on behalf of the company before the court of law and to initiate necessary legal actions and the defend the case in respect of the schedule property.

2. My Attorney shall be competent to file complaint, suit, petitions, applications, swear affidavit, to give evidence and represent the company before the Court touching the matter in dispute in respect of the schedule property and prosecute the case on behalf of the company and in connection with the said case, my Attorney shall be competent to engage the service of Advocate sign Vakalats, sign and verify pleadings.

Teachingninja.in

3. My Attorney shall also be competent to file appeals or revision arising out of the litigation in respect of the schedule property and engage service of Advocate or Advocates in case of necessities before such other Court or Courts including Courts having Revisional and Appellate jurisdiction.

4. My Attorney shall also be competent to represent me before Municipal Corporation and Mescom in respect of the schedule property.

5. My Attorney shall be competent to do all other acts, deeds and things that are necessary to prosecute and complete the litigations and all such acts, deeds and things lawfully done by my Attorney, I hereby agree to ratify and confirm."

**III. <u>Translate the following passage from a Judgment into Kannada language:</u>** **20**

"11. The principles which govern the proof of a Will are well settled. The mode of proving the will does not ordinarily differ from that of proving any other document except as to the special requirement of attestation prescribed in the case of a will by Section 63 of the Indian Succession Act. The onus of proving the will is on the propounder of the will and, in the absence of suspicious circumstances surrounding the execution of the will, proof of testamentary capacity and the signature of

Teachingninja.in

the testator as required by law is sufficient to discharge the onus. Where, however, there are suspicious circumstances, the onus is on the propounder of the will to explain them to the satisfaction of the Court before it accepts the will as genuine. Wherever, the caveator alleges undue influence, fraud and coercion, the onus is on him to prove the same. Even where there are no such pleas but the circumstances give rise to doubts, it is for the propounder of the will to satisfy the conscience of the Court. The suspicious circumstances may be as to the genuineness of the signature of the testator, the condition of the testator's mind, the dispositions made in the will being unnatural, improbable or unfair in the light of relevant circumstances or there might be other indications in the will to show that the testator's mind was not free. In such a case, the Courts would naturally expect that all legitimate suspicion should be completely removed before the document is accepted as the last will of the testator."

## PART-II

**IV. Translate the following deposition into English language: 15**

ಮೊದಲನೇ ವಾದಿ ನನಗಿಂತ 15 ವರ್ಷ ದೊಡ್ಡವರು ಎಂದರೆ ಸರಿ. ನಾನು ಮತ್ತು ಮೊದಲನೇ ವಾದಿ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಮೊದಲನೇ ವಾದಿ ಕಳೆದ 3 – 4 ವರ್ಷಗಳಿಂದ ದಾವಣಗೆರೆಯ ವಿನೋಬಾನಗರದಲ್ಲಿ ವಾಸವಾಗಿದ್ದಾರೆ. ಅವರು ವಾಸವಾಗಿರುವ ಮನೆಯ ನಂಬರ್ ನನಗೆ ನೆನಪಿಲ್ಲ. ಅದಕ್ಕಿಂತ ಮೊದಲು ಮೊದಲನೇ ವಾದಿ ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿ ಸುಮಾರು 3 – 4 ವರ್ಷಗಳ ಕಾಲ ವಾಸವಾಗಿದ್ದರು. ಅದಕ್ಕಿಂತ

Teachingninja.in

ಮೊದಲು ಮೊದಲನೇ ವಾದಿ ದಾವಣಗೆರೆಯ ವಿನೋಬಾನಗರದಲ್ಲಿ ಸುಮಾರು 5 – 6 ವರ್ಷಗಳ ಕಾಲ ವಾಸವಾಗಿದ್ದರು. 1991 ನೇ ಸಾಲಿನಲ್ಲಿ ಮೊದಲನೇ ವಾದಿ ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿ ವಾಸವಾಗಿದ್ದರು. ಮೊದಲನೇ ವಾದಿಯೊಂದಿಗೆ ಅವರ ಪತ್ನಿ ಮತ್ತು ಮಗ, ಸೊಸೆ ಅವರೊಂದಿಗೆ ವಾಸವಾಗಿದ್ದರು. ಮೊದಲನೇ ವಾದಿಯ ಪತ್ನಿಯ ಹೆಸರು ಅನುಸೂಯಮ್ಮ ಎಂದರೆ ಸರಿ. ಅನುಸೂಯಮ್ಮ ಈಗಲೂ ಸಹ ಮೊದಲನೇ ವಾದಿಯೊಂದಿಗೆ ವಾಸವಾಗಿದ್ದಾರೆ. ಅನುಸೂಯಮ್ಮ ಮತ್ತು ಮೊದಲನೇ ವಾದಿ ಅನ್ಯೊನ್ಯವಾಗಿದ್ದಾರೇ ಎಂದರೆ ಸರಿ. ನಾನು ದಾವಣಗೆರೆಯ ಕಾಯಿಪೇಟೆಯಲ್ಲಿ ಮನೆ ನಂಃ 463-1 ರಲ್ಲಿ ಕಳೆದ 9 ವರ್ಷಗಳಿಂದ ವಾಸವಾಗಿದ್ದೇನೆ. ಅದಕ್ಕಿಂತ ಮೊದಲು ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿ ವಾಸಮಾಡುತ್ತಿದ್ದೆನು. 1991 ನೇ ಸಾಲಿನಲ್ಲಿ ನಾನು ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿ ವಾಸಮಾಡುತ್ತಿದ್ದೆನು. ನನ್ನೊಂದಿಗೆ ನನ್ನ ಪತ್ನಿ ಮತ್ತು 3 ಜನ ಮಕ್ಕಳು ವಾಸವಾಗಿದ್ದಾರೆ. ನನ್ನ ಪತ್ನಿಯ ಹೆಸರು ಸುವರ್ಣಮ್ಮ. ನಾನು ಮತ್ತು ನನ್ನ ಪತ್ನಿ ಅನ್ಯೊನ್ಯವಾಗಿದ್ದೇವೆ. ಸರ್ವಮಂಗಳಮ್ಮ ನನಗೆ ಹಾಗೂ ಮೊದಲನೇ ವಾದಿಗೆ ತಾಯಿ ಎಂದರೆ ಸರಿ. ನನ್ನ ತಾಯಿ ನನ್ನೊಂದಿಗೆ ಅಥವಾ ಮೊದಲನೇ ವಾದಿಯೊಂದಿಗೆ ವಾಸಮಾಡುತ್ತಿಲ್ಲ ಎಂದರೆ ಸರಿ ಸಾಕ್ಷಿಯು ನನ್ನ ತಮ್ಮನ್ನೊಂದಿಗೆ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ನನಗೆ 2 ನೇ ಪ್ರತಿವಾದಿ ಒಬ್ಬನೇ ತಮ್ಮ.

ದಿಃ 13.06.2006 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದ ಮೃತಪಟ್ಟ ಸಮಯದಲ್ಲಿ ದಾವಣಗೆರೆಯ ರೇಣುಕಾ ಬಡಾವಣೆಯಲ್ಲಿ ದೈವಜ್ಞ ಕಲ್ಯಾಣ ಮಂಟಪದ ಎದುರುಭಾಗದ ಮನೆಯಲ್ಲಿ ವಾಸವಾಗಿದ್ದರು. ನನ್ನ ತಂದೆಯೊಂದಿಗೆ ನನ್ನ ತಾಯಿ ಮತ್ತು ನನ್ನ ತಮ್ಮ 2 ನೇ ಪ್ರತಿವಾದಿ ವಾಸವಾಗಿದ್ದರು. 1991 ನೇ ಸಾಲಿನಿಂದ ನನ್ನ ತಂದೆ, ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ದಾವಣಗೆರೆಯ ರೇಣಾ ಬಡಾವಣೆಯಲ್ಲಿ ದೈವಜ್ಞ ಕಲ್ಯಾಣ ಮಂಟಪದ ಎದುರುಭಾಗದ ಮನೆಯಲ್ಲಿ ವಾಸವಾಗಿದ್ದರು.

Teachingninja.in

V. **Translate the following document into English language:** 15

"ಸನ್ ಸಾವಿರದ ಒಂಬೈನೂರ ತೊಂಭತ್ತಾರನೇ ಇಸವಿ ಫೆಬ್ರುವರಿ ಮಾಹೇ ತಾರೀಕು ಹದಿನೈದರಂದು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕು ಗೋಣಿಬೀಡು ಹೋಬಳಿ ದೇವರುಂದ ಗ್ರಾಮ ಮತ್ತು ಅಂಚೆ ಜಪಾವತಿ ಎಸ್ಟೇಟ್ ವಿಳಾಸದ ವಾಸಿಗಳು ಶ್ರೀ ಜೆ.ವಿ.ಸುಬ್ರಾಯ ಬಿನ್ ಜೆ.ವಿ.ವಸಂತೇಗೌಡ ಸುಮಾರು 34 ವರ್ಷ ವಯಸ್ಸು ಕಾಫಿ ಬೆಳೆಗಾರರು ಆದ ನಿಮಗೆ (ನೀವು ನಿಮ್ಮ ವಾರಸುದಾರರು ನಾಮಿನಿಗಳು ಹಕ್ಕು ವರ್ಗಾವಣೆ ಪಡೆದವರು ಸಹಾ ಸೇರ್ಪಡೆಯಾಗುತ್ತೀರಿ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕು ಮೂಡಿಗೆರೆ ಟೌನ್ ಸುಭಾಶ್ ರೋಡು ಬಡಾವಣೆ ವಿಳಾಸದ ವಾಸಿ ದಿವಂಗತ ಶ್ರೀ ಬಸ್ತಿಮಲ್ ರವರ ಮಗಳು ಸುಮಾರು 30 ವರ್ಷ ವಯಸ್ಸಿನ ವಿಮಲ ಕುಮಾರಿ ಆದ ನಾನು (ನಾನು ನನ್ನ ವಾರಸುದಾರರ ನಾಮಿನಿಗಳು ಹಕ್ಕು ವರ್ಗಾವಣೆ ಪಡೆದವರು ಸಹಾ ಸೇರ್ಪಡೆಯಾಗುತ್ತೇವೆ) ಈ ಮೂಲಕ ಮಾಡಿಕೊಟ್ಟ ಶೆಡ್ಯೂಲು ಸೊತ್ತಿನ ಶುದ್ಧ ಕ್ರಯಪತ್ರ ಏನೆಂದರೆ

1. ಮುಂದೆ ಶೆಡ್ಯೂಲು ಕಾಣಿಸಿರುವಂತಹ ಸ್ಥಿರ ಸ್ವತ್ತು ಒಂದು ಇತರೆ ಸ್ವತ್ತುಗಳೊಂದಿಗೆ ಇದೇ ಮೂಡಿಗೆರೆ ಸಬ್ ರಿಜಿಸ್ಟ್ರಾರ್ ರವರ ಕಛೇರಿಯ 1ನೇ ಪುಸ್ತಕದ 516ನೇ ಸಂಪುಟದ 165-172ನೇ ಪುಟಗಳಲ್ಲಿ 524/83-84ನೇ ಕ್ರಮಾಂಕವಾಗಿ ದಿನಾಂಕ 10.6.1993 ನೇ ಕ್ರಯಪತ್ರದ ಮೂಲಕ ಎಂ.ಕೆ.ವೆಂಕಟಸುಬ್ಬಯ್ಯ ಮತ್ತು ಇತರೆಯವರಿಂದ ಶುದ್ಧ ಕ್ರಯಕ್ಕೆ ಖರೀದಿಸಿದ್ದು ನನ್ನ ಸ್ವಯಾರ್ಜಿತವಾದ ಸ್ವತ್ತಾಗಿರುತ್ತೆ. ಈ ಸ್ವತ್ತಿಗೆ ನಾನು ಮಾತ್ರ ಪ್ರಶ್ನಾತೀತವಾದ ಕಾನೂನು ಬದ್ಧ ಹಕ್ಕುದಾರಳಾಗಿರುತ್ತೇನೆ ಹಾಗೂ ಬೇರಾರಿಗೂ ಯಾವುದೇ ರೀತಿಯ ಹಕ್ಕಾಗಲೀ ಸ್ವಾಧೀನವಾಗಲೀ ಇರುವುದಿಲ್ಲ.

2. ಶೆಡ್ಯೂಲು ಸ್ವತ್ತನ್ನು ನಾನು ಖರೀದಿಸುವಾಗ ಕೈ ಸಾಲಗಳನ್ನು ಮಾಡಿಕೊಂಡಿದ್ದೆ. ಸದರಿ ಸಾಲಗಳು ಮರುಪಾವತಿಯಾಗಬೇಕಾಗಿದೆ ಹಾಗೂ ಬೇರೆ ಆಸ್ತಿ ಖರೀದಿಸುವ ಉದ್ದೇಶ ಹೊಂದಿರುತ್ತೇನೆ. ಆದರ ಕಾರಣದಿಂದ ನಾನು ಶೆಡ್ಯೂಲು ಸ್ವತ್ತನ್ನು ಮಾರಾಟ ಮಾಡುವುದು ಅನಿವಾರ್ಯವಾದ್ದರಿಂದ ನನ್ನ ಆಶಯವನ್ನು

Teachingninja.in

ಪ್ರಚರಪಡಿಸಲಾಗಿ ನೀವು ಶೆಡ್ಯೂಲು ಸ್ವತ್ತನ್ನು ಕೊಂಡುಕೊಳ್ಳಲು ಮುಂದೆ ಬಂದು ಶೆಡ್ಯೂಲು ಸ್ವತ್ತಿಗೆ ರೂ. 2,67,000-00 (ರೂ. ಎರಡು ಲಕ್ಷದ ಅರವತ್ತೇಳು ಸಾವಿರ) ಮಾತ್ರಗಳನು ಕೊಟ್ಟು ಕೊಂಡುಕೊಳ್ಳಲು ತಿಳಿಸಿದ್ದರ ಮೇರೆಗೂ ಇದುವರೆಗೂ ಈ ಬೆಲೆಗೆ ಶೆಡ್ಯೂಲು ಸ್ವತ್ತನ್ನು ಖರೀದಿಸಲು ಬೇರಾರು ಬಾರದೆ ಇದ್ದುದರಿಂದಲೂ ಶೆಡ್ಯೂಲು ಸ್ವತ್ತನ್ನು ಸದರಿ ಸ್ವತ್ತುಗಳಲ್ಲಿ ಇರತಕ್ಕ ಜಲತರು ಬಳ್ಳಿ ಪಾಷಾಣ ನಿಧಿ ನಿಕ್ಷೇಪ ಗಿಡ ಮರಗಳು ನೀರು ಹಾಯುವಳಿ ದಾರಿ ಹಕ್ಕು ನೀರಿನಹಕ್ಕು ಹಾಗೂ ಶೆಡ್ಯೂಲು ಸ್ವತ್ತನಲ್ಲಿ ನನಗಿರಬಹುದಾದ ಸಮಸ್ತ ಹಕ್ಕು ಹಾಗೂ ಹಿತಾರ್ಥಗಳೊಂದಿಗೆ ರೂ 2,67,000-00 (ರೂ. ಎರಡು ಲಕ್ಷದ ಆರುವತೇಳು ಸಾವಿರ) ಮಾತ್ರಗಳ ಶುದ್ಧ ಕ್ರಯಕ್ಕೆ ಮಾರಾಟ ಮಾಡಿ ಈ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇನೆ.

**VI. <u>Translate the following passage from a Judgment into English language:</u>** **20**

"6. ದಂ.ಪ್ರ.ಸಂ.ಯ 125ನೇ ಕಲಂ, ಸಾಮಾಜಿಕ ಉದ್ದೇಶವನ್ನು ಸಾಧಿಸುವುದಕ್ಕಾಗಿದೆ ಮತ್ತು ಆದುದರಿಂದ, ಯಾವ ಕಾನೂನು, ಮದುವೆ ಸಮಾರಂಭವನ್ನು ಸಾಂಪ್ರದಾಯಿಕ ರೀತಿಯಲ್ಲಿ ನೆರವೇರಿಸಿದ್ದಾಗ್ಯೂ, ಕಾನೂನು ಪಾವಿತ್ರ್ಯವನ್ನು ಹೊಂದಿಲ್ಲವೆಂದು ಏಕಮಾತ್ರ ಕಾರಣದಿಂದ, ಆಕೆಯ ಗಂಡನಿಂದ ಜೀವನಾಂಶ ಪಡೆಯುವುದರಿಂದ ಎರಡನೆಯ ಹೆಂಡತಿಯನ್ನು ಅನರ್ಹಗೊಳಿಸುವುದೋ ಆ ಕಾನೂನನ್ನು ಗಂಡನು, ಕಾನೂನು ಸಮ್ಮತ ಮತ್ತು ಸಿಂಧುವಾದ ಮದುವೆಯನ್ನು ತೃಪ್ತಿಕರವಾಗಿ ರುಜುವಾತುಪಡಿಸಿದಾಗ, ವಿಶೇಷವಾಗಿ, ಸಂಹಿತೆಯಲ್ಲಿರುವ ಉಪಬಂಧವು ಮಹಿಳೆಯರು ಮತ್ತು ಮಕ್ಕಳನ್ನು ರಕ್ಷಿಸಲು ಉದ್ದೇಶ ಹೊಂದಿರುವ ಸಾಮಾಜಿಕ ನ್ಯಾಯದ ಕ್ರಮವಾಗಿರುವಾಗ ಮಾತ್ರ ಅನ್ವಯಿಸಬಹುದು. ದಂ.ಪ್ರ.ಸಂ.ಯ 125ನೇ ಕಲಂನ ಉಪಬಂಧಗಳ ಉದ್ದೇಶವು, ಅಲೆಮಾರಿತನ ಮತ್ತು ನಿರಾಶ್ರಿತತೆಯನ್ನು ತಡೆಗಟ್ಟುವುದಾಗಿದೆ. ಅದು, ಪರಿತ್ಯಜಿಸಿದ ಹೆಂಡತಿಗೆ ಆಹಾರ, ಬಟ್ಟೆ ಮತ್ತು ವಸತಿಯನ್ನು ಒದಗಿಸುವಲ್ಲಿ ಕ್ಷಿಪ್ರ

Teachingninja.in

ಪರಿಹಾರವನ್ನು ಒದಗಿಸುತ್ತದೆ. ಆತನು ಈಗಾಗಲೇ ಮದುವೆಯಾಗಿರುವನೆಂಬ ಕೋರಿಕೆಯ ವಾದದ ಮೇಲೆ, ಆಕೆಯನ್ನು ಇಟ್ಟುಕೊಳ್ಳಲಾದ ಉಪಪತ್ನಿಯ ಹಾಗೆ ಚಿತ್ರಿಸಿ, ನಿರ್ಲಕ್ಷಿಸಲಾದ ಹೆಂಡತಿಯ ಹಕ್ಕೊತ್ತಾಯವನ್ನು ನಕಾರಾತ್ಮಗೊಳಿಸಲು ಗಂಡನು ಪ್ರಯತ್ನ ಮಾಡಿದಾಗ, ನ್ಯಾಯಾಲಯವು ಮುಂಚಿನ ಮದುವೆಯ ಖಚಿತವಾದ ರುಜುವಾತಿನ ಬಗ್ಗೆ ಒತ್ತಾಯಪಡಿಸುತ್ತದೆ. ದಂ.ಪ್ರ.ಸಂ.ಯ 125ನೇ ಕಲಮಿನಡಿ, ಜೀವನಾಂಶದ ವ್ಯವಹರಣೆಯಲ್ಲಿ ನ್ಯಾಯಾಲಯಗಳು ಪಕ್ಷಕಾರರ ವೈವಾಹಿಕ ಸ್ಥಾನಮಾನದ ಬಗ್ಗೆ ಮೊದಲನೋಟಕ್ಕೆ ತೃಪ್ತಿಪಟ್ಟ ನಂತರ, ಯುಕ್ತ ಆದೇಶಗಳನ್ನು ಮಾಡಲು ನಿರೀಕ್ಷಿಸಲಾಗಿದೆ. ಸದರಿ ತೀರ್ಪು, ಪಕ್ಷಕಾರರು ಹಾಗೆ ಅನುಸರಿಸಲು, ಸಲಹೆ ನೀಡಿದರೆ, ಯಾವುದೇ ಸಿವಿಲ್ ವ್ಯವಹರಣೆಗಳಲ್ಲಿನ ಅಂತಿಮ ಆದೇಶಕ್ಕೆ ಒಳಪಟ್ಟು, ತಾತ್ಕಾಲಿಕ ತೀರ್ಪು ಆಗಿರುತ್ತದೆ.

***

Teachingninja.in